**<u>ದಿನಾಂಕಃ 13.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಂ ಪಿ ವಕೀಲರಿಂದಃ</u>**

ನಬೀಸಾಬನ ಮಕ್ಕಳಾದ 2 ಮತ್ತು 2 ನೇ ಪ್ರತಿವಾದಿಯರು 3-4 ವರ್ಷಗಳಿಂದ ಪರಿಚಯ ಇರುತ್ತಾರೆ. ನಬೀಸಾಬ ಮತ್ತು ಅವರ ತಂದೆಯ ಮನೆತನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಸಬೀಸಾಬನ ತಂದೆಯಾದ ಭಾವಸಾಬನಿಗೆ ಎಷ್ಟು ಆಸ್ತಿಗಳು ಇದ್ದವು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಹೊಲ ತೆಗೆದುಕೊಳ್ಳಲು ಕೇಳಲು 1 ಮತ್ತು 3 ನೇ ಪ್ರತಿವಾದಿಯರು ಬಂದಿದ್ದರು. ಸದರಿಯವರು ನಮ್ಮ ಮನೆಗೆ ಬಂದಾಗ ಅವರ ಮನೆತನದ ಬಗ್ಗೆ ಮತ್ತು ಎಷ್ಟು ಜನ ಅಣ್ಣ ತಮ್ಮ ಇರುತ್ತಾರೆ ಎಂದು ಕೇಳಿರುತ್ತೇನೆ. ದಾವಾ ಜಮೀನನ್ನು ಖರೀದಿ ಮಾಡುವಾಗ 50 ವರ್ಷಗಳ ಪಹಣಿಗಳನ್ನು ನೋಡಿರುತ್ತೇನೆ. ಸದರಿ 50 ವರ್ಷಗಳ ಪಹಣಿಯಲ್ಲಿ ಭಾವಾಸಾಬನ ಹೆಸರು ದಾಖಲು ಇತ್ತು. ಭಾವಾಸಾಬನಿಗೆ ಎಷ್ಟು ಜನ ಮಕ್ಕಳು ಇದ್ದರು ಎನ್ನುವ ಬಗ್ಗೆ ನಾನು ವಿಚಾರಿಸಿರಲಿಲ್ಲ. ಭಾವಾಸಾಬನ ಎಷ್ಟು ಜನ ಮಕ್ಕಳು ಯಾರು ಯಾರಿಗೆ ಎಷ್ಟು ಆಸ್ತಿ ಬರುತ್ತದೆ ಎನ್ನುವ ಬಗ್ಗೆ ನಾನು ವಿಚಾರ ಮಾಡಿಲ್ಲ. ನಬೀಸಾಬನಿಗೆ ಎಷ್ಟು ಜನ ಅಣ್ಣ-ತಮ್ಮಂದಿರು ನಾನು ವಿಚಾರ ಮಾಡಿರುವುದಿಲ್ಲ. ನಬೀಸಾಬ ಮತ್ತು ಅತನ ಸಹೋದರರು ನಡುವೆ ಪಾಲುವಿಭಾಗ ಆದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು 50 ವರ್ಷಗಳ ಹಿಂದೆ ಆದ ಪಾಲುವಿಭಾಗ ನನಗೆ ಗೊತ್ತಿರುವುದಿಲ್ಲ. ಭಾವಾಸಾಬನಿಗೆ 6 ಜನ ಮಕ್ಕಳು ಇದ್ದು, ಸದರಿಯವರನು ತೀರಿಕೊಂಡಿದ್ದು, ಆತನು ತೀರಿಕೊಂಡ ನಂತರ ಎಲ್ಲರಿಗೂ ಸಮಾನ ಹಕ್ಕು ಬರುತ್ತದೆ ಎಂದರೆ ಸರಿಯಲ್ಲ. ಭಾವಾಸಾಬ ತೀರಿಕೊಂಡ ನಂತರ ಸಬೀಸಾಬನು ಕುಟುಂಬದ ಹಿರಿಯ ಇದುದ್ದರಿಂದ ದಾವಾ ಆಸ್ತಿಯನ್ನು ಆತನ ಹೆಸರಿನಲ್ಲಿ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಭಾವಾಸಾಬ ಜೀವಂತ ಇದ್ದಾಗ ನಬೀಸಾಬನ ಹೆಸರಿಗೆ ಆಸ್ತಿ ಮಾಡಿರುತ್ತಾನೆ

ಎನ್ನುವುದಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಬೀಸಾಬನು ತನ್ನ ಅಣ್ಣ-ತಮ್ಮಂದಿರ ಪಾಲುನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸಿಯಲ್ಲಿ ಭಾವಾಸಾಬನ ಮಕ್ಕಳಿಗೆ ಸಮನಾದ ಪಾಲು ಇರುತ್ತದೆ ಎಂದರೆ ಸರಿಯಲ್ಲ . ಸದರಿ ಎಲ್ಲಾ ಸಂಗತಿ ಗೊತ್ತಿದ್ದರೂ ಸಹಿತ ನಾನು ಉದ್ದೇಶಪೂರ್ವಕವಾಗಿ ದಾವಾ ಆಸ್ತಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.